Implementing Dr. C. R. Reddy's recommendations on Educational reform.

Q.—166. **Sri P. R. RAMAIYA** (Basavanagudi).—

Will the Government be pleased to state :—

the measures taken by them to implement the late Sri C. R. Reddy's recommendations on education in Mysore ?

A.—**Sri A. G. RAMACHANDRA RAO** (Minister for Law and Education).—

The recommendations, which involve considerable financial commitments, are under the consideration of Government.

ಶ್ರೀ ಪಿ. ಆರ್. ರಾಮಯ್ಯನವರು.—ಈ ಪ್ರಶ್ನೆಗೆ the recommendations, which involve considerable financial commitments, are under the consideration of Government ಎಂದು ಅಪ್ಪಣೆ ಕೊಟ್ಟಿದ್ದಾರೆ, ಇದು ತೀರ್ಮಾನವಾಗಲು ಎಷ್ಟುಕಾಲ ಹಿಡಿಯುತ್ತದೆ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಅದನ್ನು ಹೇಳುವುದು ಸಾಧ್ಯವಿಲ್ಲ.

ಶ್ರೀ ಪಿ. ಆರ್. ರಾಮಯ್ಯನವರು.—ಇಂಡಿಯಾ ಸರ್ಕಾರದವರು ಈ ವಿದ್ಯಾಭ್ಯಾಸ ಸುಧಾರಣೆಯ ವಿಷಯವನ್ನು ಆಲೋಚನೆಮಾಡಿ ಸಲಹೆಯನ್ನೇನಾದರೂ ಕೊಟ್ಟಿದ್ದಾರೆಯೆ ?

ಶ್ರೀ ಎ. ಜಿ. ರಾಮಚಂದ್ರರಾಯರು.—ನಿರ್ದಿಷ್ಟವಾಗಿ ಏನೂ ಸಲಹೆ ಕೊಟ್ಟಿಲ್ಲ.

ಶ್ರೀ ಪಿ. ಆರ್. ರಾಮಯ್ಯನವರು.—ನೀವು ಇಲ್ಲಿ ಯಾವುದೇ ಸುಧಾರಣೆ ತರಬೇಕಾದರೂ, ಅದು ಅಖಿಲ ಭಾರತದ ಕಟ್ಟುಪಾಡಿಗನುಗುಣವಾಗಿರಬೇಕಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಪಿ. ಆರ್. ರಾಮಯ್ಯನವರು.—ಈಗಾಗಲೇ ಕೇಂದ್ರ ಸರ್ಕಾರದವರು ಪ್ರಾಥಮಿಕ ವಿದ್ಯಾಭ್ಯಾಸದ ವಿಷಯದಲ್ಲಿ basic system of education ಪ್ರಕಾರ ಇದನ್ನು ಸುಧಾರಣೆಮಾಡಬೇಕೆಂಬುದಾಗಿ ಕಟ್ಟುನಿಟ್ಟಾದ ಸಲಹೆಯನ್ನು ಕೊಟ್ಟಿದ್ದಾರೆಯೆ ?

ಶ್ರೀ ಎ. ಜಿ. ರಾಮಚಂದ್ರರಾಯರು.—ತಾವು ತಿಳಿದುಕೊಂಡಿರುವಷ್ಟುಮಟ್ಟಿಗೆ ಕಟ್ಟುನಿಟ್ಟಾಗಿ, ನಿರ್ಬಂಧವಾಗಿ ಕೊಟ್ಟಿಲ್ಲ.

ಶ್ರೀ ಎಸ್. ಕರಿಯಪ್ಪನವರು (ವಿರೂಪಾಕ್ಷಪುರ).—ಈಗಿನ ವಿದ್ಯಾಭ್ಯಾಸ ಕ್ರಮವನ್ನು ಸುಧಾರಿಸಿ ಕೆಲಸ ಮತ್ತು ವಿದ್ಯೆ ಎರಡನ್ನೂ ಅಳವಡಿಸಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಹಾಗೆ ಮಾಡುವುದು ಸೂಕ್ತವೆಂಬ ಅಭಿಪ್ರಾಯವಿದೆ.

ಶ್ರೀ ಎಸ್. ಕರಿಯಪ್ಪನವರು.—ರಾಧಾಕೃಷ್ಣ್ ಅವರ ವರದಿಯನ್ನು ತೆಗೆದುಕೊಂಡು ಅದನ್ನು ಜಾರಿಗೆ ತರಬೇಕೆಂದು ಆಲೋಚನೆಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಅವರ ವರದಿಯೊಂದೇ ಅಲ್ಲ, ಇನ್ನೂ ಅನೇಕರು ಕೇಳಿದ್ದಾರೆ.

ಶ್ರೀ ಎಸ್. ಕರಿಯಪ್ಪನವರು.—Rural University idea ಅದರಲ್ಲಿರುವುದನ್ನು ಜಾರಿಗೆ ತರಬೇಕೆಂದು ಆಲೋಚನೆಯುಲ್ಲದೆಯೆ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಸುಧಾರಣೆ ಪ್ರಶ್ನೆ ಆಲೋಚನೆಯಲ್ಲಿದೆ ಎಂದು ಹೇಳಿದ್ದೇನೆ.

ಶ್ರೀ ಕೆ. ಪಟ್ಟಾಭಿರಾಮ್ ಅವರು ಕೋಲಾರ).—ಇನ್ನು ಎಷ್ಟುಕಾಲ ಈ ರೀತಿ ಪರ್ಯಾಲೋಚನೆಯಲ್ಲಿರುತ್ತದೆ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಪಟ್ಟಾಭಿರಾಮ್ ಅವರು —ಈಗ ಮೂರು ವರ್ಷಗಳಿಂದಲೂ ಹೀಗೆ ಪರ್ಯಾಲೋಚನೆಯಲ್ಲಿದೆ ಎಂದು ಹೇಳುತ್ತಿರುವುದು ತಮಗೆ ಗೊತ್ತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾಯರು.—ನಾವು ಬಂದು ಇನ್ನೂ ಮೂರು ತಿಂಗಳು ಕೂಡ ಆಗಿಲ್ಲ.

ಶ್ರೀ ಕೆ. ಪಟ್ಟಾಭಿರಾಮ್ ಅವರು.—ಸರ್ಕಾರ ಯಾವಾಗಲೂ ಇದ್ದೇ ಇದೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಈಗಿನ ಸರ್ಕಾರ ಅಧಿಕಾರಕ್ಕೆ ಬಂದು ಮೂರು ತಿಂಗಳಾಯಿತು ಅಷ್ಟೆ.

ಶ್ರೀ ಜಿ. ಬಸಪ್ಪನವರು (ಹೊಸದುರ್ಗ).—ಡಾ॥ ಸಿ. ಆರ್. ರೆಡ್ಡಿಯವರು ಸಲಹೆಮಾಡಿರುವ ಸುಧಾರಣೆ ಬಗ್ಗೆ ಹಣವನ್ನೊದಗಿಸಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಇಲ್ಲ.

Compulsory Primary Education.

Q.—177. **Sri A. V. NARASIMHA REDDY** (Bangalore South).—

Will the Government be pleased to state :—

(*a*) the taluks in which compulsory primary education was introduced in the State (districtwar information may kindly be furnished) ;

(*b*) the number of children educated in primary schools in Bangalore North Taluk, where there was compulsory education in primary schools, in any one of the years when it was in force ;

(*c*) the number of children educated in Bangalore South Taluk where there was no compulsory primary school education during the corresponding period ;

(*d*) whether they would consider to introduce compulsory primary education throughout the State ?